## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1470 |
| ಸದಸ್ಯರ ಹೆಸರು | : | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 17.03.2021. |
| ಉತ್ತರಿಸುವ ಸಚಿವರು | : | ಉಪ ಮುಖ್ಯಮಂತ್ರಿಗಳು<br>ಲೋಕೋಪಯೋಗಿ ಇಲಾಖೆ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹೆದ್ದಾರಿಗಳಲ್ಲಿನ ಟೋಲ್ ಪ್ಲಾಜಾಗಳಲ್ಲಿ ಫಾಸ್ಟ್‌ಟ್ಯಾಗ್ ಜಾರಿಯಾದ ಬಳಿಕವೂ ತ್ವರಿತ ಸಂಚಾರ ಸಾಧ್ಯವಾಗದೇ ಕಿ.ಮೀ ಗಟ್ಟಲೆ ಕ್ಯೂ ನಿಂದಾಗಿ ಸಂಚಾರ ದಟ್ಟಣೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಷ್ಟ್ರೀಯ ಹೆದ್ದಾರಿ ವಲಯದ ವ್ಯಾಪ್ತಿಯಲ್ಲಿ ಫಾಸ್ಟ್ ಟ್ಯಾಗ್ ಅಳವಡಿಕೆಯಿಂದಾಗಿ ಫಾಸ್ಟ್ ಟ್ಯಾಗ್ ಬಳಕೆದಾರರ ಸಂಖ್ಯೆ ಶೇಕಡವಾರು ಹೆಚ್ಚಾಗಿರುತ್ತದೆ. ಆದರೂ ಇನ್ನೂ ಫಾಸ್ಟ್ ಟ್ಯಾಗ್ ಅನುಷ್ಠಾನವನ್ನು ಶೇ. 100 ರಷ್ಟು ಸಾಧಿಸಬೇಕಾಗಿದೆ. ಇದಕ್ಕಾಗಿ NHAI ವತಿಯಿಂದ ದೃಶ್ಯ, ಮುದ್ರಣ ಮತ್ತು ಸ್ಥಳೀಯ ಮಾಧ್ಯಮಗಳಲ್ಲಿ ಫಾಸ್ಟ್ ಟ್ಯಾಗನ್ನು ಬಳಸುವ ಬಗ್ಗೆ ವ್ಯಾಪಕವಾಗಿ ಮಾಹಿತಿಯನ್ನು ಪ್ರಕಟಿಸಲಾಗುತ್ತಿದೆ. ಆದಾಗ್ಯೂ ಫಾಸ್ಟ್ ಟ್ಯಾಗ್ ಇಲ್ಲದ ಬಳಕೆದಾರರು ಇಂತಹ ವಿನಂತಿಗಳನ್ನು ಅನುಸರಿಸದೇ ರಸ್ತೆ ಪ್ರವೇಶಿಸುತ್ತಿರುವುದರಿಂದ ಫಾಸ್ಟ್ ಟ್ಯಾಗ್ ಲೇನ್‌ಗಳಲ್ಲಿ ದೀರ್ಘವಾದ ಸಾಲು ಮತ್ತು ವಾಹನ ದಟ್ಟಣೆಗೆ ಕಾರಣವಾಗಿದೆ.<br><br>ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ರಾಜ್ಯ ಹೆದ್ದಾರಿಗಳಲ್ಲಿರುವ ಟೋಲ್ ಪ್ಲಾಜಾಗಳನ್ನು ನಿರ್ವಹಿಸುತ್ತಿದ್ದು, ಇವುಗಳಿಗೆ Fast Tag ಅಳವಡಿಸಲು ನಿಗಮದ ವತಿಯಿಂದ ಟೋಲ್ ಗುತ್ತಿಗೆದಾರರಿಗೆ ನಿರ್ದೇಶನ ನೀಡಿದ್ದು, Fast Tag ಅಳವಡಿಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| ಆ) | ಫಾಸ್ಟ್ ಟ್ಯಾಗ್ ಪೂರ್ಣ ಪ್ರಮಾಣದಲ್ಲಿ ಅನ್ವಯವಾಗದಿರಲು ಇರುವ ತಾಂತ್ರಿಕ ಅಡಚಣೆಗಳೇನು; | ರಾಷ್ಟ್ರೀಯ ಹೆದ್ದಾರಿ ವಲಯದ ವ್ಯಾಪ್ತಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಫಾಸ್ಟ್ ಟ್ಯಾಗ್ ಅಳವಡಿಕೆಯಲ್ಲಿ ಯಾವುದೇ ತಾಂತ್ರಿಕ ಅಡಚಣೆಗಳಿರುವುದಿಲ್ಲ.<br>ರಾಜ್ಯ ಹೆದ್ದಾರಿಗಳಿಗೆ ಸೇರಿದ ಟೋಲ್ ಪ್ಲಾಜಾಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ನಿರ್ವಹಿಸುತ್ತಿದ್ದು, Fast Tag ಅಳವಡಿಕೆಯು ಗುತ್ತಿಗೆಯಲ್ಲಿ ಲಭ್ಯವಿರುವುದಿಲ್ಲ. ಆದಾಗ್ಯೂ, ಕೇಂದ್ರ ಸರ್ಕಾರದ NHAI ಸಂಸ್ಥೆಯ ಭಾಗವಾದ IHMCL ನೊಂದಿಗೆ ಒಡಂಬಡಿಕೆ ಮಾಡಿಕೊಂಡು ಸದರಿ ಸಂಸ್ಥೆಯಿಂದ ಭಾಗಶಃ ಆರ್ಥಿಕ ನೆರವು ಪಡೆದು ರಾಜ್ಯ ಹೆದ್ದಾರಿಗಳಲ್ಲಿನ ಟೋಲ್ ಪ್ಲಾಜಾಗಳಿಗೆ Fast Tag ಅಳವಡಿಸಲು ನಿಗಮದ ವತಿಯಿಂದ ಟೋಲ್ ಗುತ್ತಿಗೆದಾರರಿಗೆ ನಿರ್ದೇಶನ ನೀಡಿದ್ದು, Fast Tag ಅಳವಡಿಕೆಯ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |

| | | |
|---|---|---|
| ಇ) | ಫಾಸ್ಟ್‌ಟ್ಯಾಗ್ ಸ್ಕ್ಯಾನ್ ಆಗಿಲ್ಲದೇ ಇರುವಾಗ ಶುಲ್ಕ ಆಕರಿಸಬಾರದೆಂಬ ನಿಯಮವಿದ್ದರೂ ಟೋಲ್‌ಗಳು ನಿಯಮ ಪಾಲಿಸದೇ ಶುಲ್ಕ ಪಡೆಯುತ್ತಿರುವ ಕುರಿತು ಸರ್ಕಾರದ ನಿಲುವೇನು; | ರಾಷ್ಟ್ರೀಯ ಹೆದ್ದಾರಿ ವಲಯದ ವ್ಯಾಪ್ತಿಯಲ್ಲಿ ಗೆಜೆಟ್ ಅಧಿಸೂಚನೆ ಜಿ.ಎಸ್.ಆರ್ ನಂ.427 (ಇ) 8:07.05.2018 ರ ಪ್ರಕಾರ ಎಲೆಕ್ಟ್ರಾನಿಕ್ ಟೋಲ್ ಕಲೆಕ್ಷನ್ ಮೂಲ ಸೌಕರ್ಯದ ಅಸಮರ್ಪಕ ಕಾರ್ಯದಿಂದಾಗಿ ಫಾಸ್ಟ್ ಟ್ಯಾಗ್ ಅಥವಾ ಅಂತಹ ಯಾವುದೇ ಸಾಧನ ಹೊಂದಿರುವ ಖಾತೆಯಲ್ಲಿ ಸಾಕಷ್ಟು ಮೊತ್ತವಿದ್ದಾಗ್ಯೂ ವಾಹನ ಬಳಕೆದಾರ ಶುಲ್ಕ ಪಾವತಿಸಲು ಸಾಧ್ಯವಾಗದ ಸಂದರ್ಭಗಳಲ್ಲಿ ಯಾವುದೇ ಶುಲ್ಕ ಪಾವತಿಸದೆ ಪ್ರಯಾಣಿಸಲು ಅನುಮತಿ ನೀಡಲಾಗುತ್ತದೆ. ಅಂತಹ ವಹಿವಾಟುಗಳಿಗೆ ಸೂಕ್ತವಾದ ಶೂನ್ಯ ವಹಿವಾಟು ರಶೀದಿಯನ್ನು ಕಡ್ಡಾಯವಾಗಿ ನೀಡಲಾಗುತ್ತದೆ.<br><br>ರಾ.ಹೆ. ಶುಲ್ಕ (ದರ ನಿರ್ಣಯ ಮತ್ತು ಸಂಗ್ರಹಣೆ) ನಿಯಮ 2008 ಉಪ ನಿಯಮ (2)ರ ಪ್ರಕಾರ ಮತ್ತು ಗೆಜೆಟ್ ಅಧಿಸೂಚನೆ ಜಿ.ಎಸ್.ಆರ್. ನಂ. 295 (ಇ) ದಿನಾಂಕ: 15.05.2020 ರ ಪ್ರಕಾರ ಕ್ರಿಯಾತ್ಮಕ ಫಾಸ್ಟ್ ಟ್ಯಾಗ್ ಇಲ್ಲದ ಅಥವಾ ಫಾಸ್ಟ್ ಟ್ಯಾಗ್ ಅಳವಡಿಸದ ವಾಹನದ ಬಳಕೆದಾರರು ಟೋಲ್ ಪ್ಲಾಜಾಗಳ ಫಾಸ್ಟ್ ಟ್ಯಾಗ್ ಲೇನ್ ಪ್ರವೇಶದ ಶುಲ್ಕದ ಎರಡು ಪಟ್ಟು ಶುಲ್ಕವನ್ನು ಪಾವತಿಸಬೇಕು. |
| ಈ) | ಫಾಸ್ಟ್‌ಟ್ಯಾಗ್ ಹೊಂದಿರುವ ಹಾಗೂ ಹೊಂದದಿರುವ ಗ್ರಾಹಕರು ಒಂದೇ ಪಥದಲ್ಲಿ ಸಂಚರಿಸುವ ವ್ಯವಸ್ಥೆಯಿದ್ದು, ಭಿನ್ನ ಪಥಗಳ ಬಳಕೆಗೆ ಸರ್ಕಾರ ಕೈಗೊಂಡ ಕ್ರಮಗಳೇ? | ರಾಷ್ಟ್ರೀಯ ಹೆದ್ದಾರಿಗಳಲ್ಲಿ ಈ ನಿಟ್ಟಿನಲ್ಲಿ ಪ್ರತಿ ಲೇನ್ ನಲ್ಲಿ ಸಾಕಷ್ಟು ಸಂಖ್ಯೆಯ ಮಾರ್ಷಲ್ ಗಳನ್ನು ತೊಡಗಿಸಲು ಮತ್ತು ಫಾಸ್ಟ್ ಟ್ಯಾಗ್ ಇಲ್ಲದ ವಾಹನಗಳು ಫಾಸ್ಟ್ ಟ್ಯಾಗ್ ಲೇನ್ ಗೆ ಪ್ರವೇಶಿಸದಂತೆ ನೋಡಿಕೊಳ್ಳಲು ಎಲ್ಲಾ ಟೋಲ್ ಪ್ಲಾಜಾ ನಿರ್ವಾಹಕರಿಗೆ ನಿರ್ದೇಶನ ನೀಡಲಾಗಿದೆ ಎಂದು NHAI ರವರು ವರದಿಸಿರುತ್ತಾರೆ.<br><br>ಪ್ರಸ್ತುತ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ರಾಜ್ಯ ಹೆದ್ದಾರಿಗಳಲ್ಲಿರುವ ಟೋಲ್ ಪ್ಲಾಜಾಗಳಲ್ಲಿ ಎರಡು ಪಥಗಳ ಪೈಕಿ ಒಂದು ಪಥಕ್ಕೆ Fast Tag ಅಳವಡಿಸಲು ಯೋಜಿಸಲಾಗಿದೆ. |

ಕಡತ ಸಂಖ್ಯೆ: ಲೋಇ 91 ಸಿಎನ್‌ಹೆಚ್ 2021 (ಇ)

(ಗೋವಿಂದ ಎಂ.ಕಾರಜೋಳ)
ಉಪ ಮುಖ್ಯಮಂತ್ರಿ,
ಲೋಕೋಪಯೋಗಿ ಇಲಾಖೆ